7. ಅಲ್ಲಾಹನು ಇಚ್ಛಿಸಿದ್ದರ ಹೊರತು.[5] ಅವನು ವ್ಯಕ್ತವಾಗಿರುವುದನ್ನೂ ಗುಪ್ತವಾಗಿರುವುದನ್ನೂ ಬಲ್ಲನು.	إِلَّا مَا شَاءَ اللَّهُ ۚ إِنَّهُ يَعْلَمُ الْجَهْرَ وَمَا يَخْفَىٰ ﴿٧﴾
8. ನಾವು ನಿಮಗೆ ಸರಳ ವಿಧಾನದ ಸೌಲಭ್ಯ ನೀಡುತ್ತೇವೆ.	وَنُيَسِّرُكَ لِلْيُسْرَىٰ ﴿٨﴾
9. ಆದುದರಿಂದ ಉಪದೇಶದಿಂದ ಪ್ರಯೋಜನವಾಗುವುದಿದ್ದರೆ ನೀವು ಉಪದೇಶ ನೀಡಿರಿ.[6]	فَذَكِّرْ إِن نَّفَعَتِ الذِّكْرَىٰ ﴿٩﴾
10. ಭಯಭಕ್ತಿಯುಳ್ಳವನು ಉಪದೇಶವನ್ನು ಸ್ವೀಕರಿಸಿಕೊಳ್ಳುವನು-	سَيَذَّكَّرُ مَن يَخْشَىٰ ﴿١٠﴾
11. ಮತ್ತು ಅದರಿಂದ ದೂರವುಳಿಯುವವನು ಅತ್ಯಂತ ಭಾಗ್ಯಹೀನನು-	وَيَتَجَنَّبُهَا الْأَشْقَى ﴿١١﴾
12. ಅವನು ಘೋರ ಅಗ್ನಿಯಲ್ಲಿ ಬೀಳುವನು.	الَّذِي يَصْلَى النَّارَ الْكُبْرَىٰ ﴿١٢﴾
13. ಅನಂತರ ಅವನು ಅದರಲ್ಲಿ ಸಾಯಲಿಕ್ಕೂ ಇಲ್ಲ, ಬದುಕಲಿಕ್ಕೂ ಇಲ್ಲ.	ثُمَّ لَا يَمُوتُ فِيهَا وَلَا يَحْيَىٰ ﴿١٣﴾
14. ಪಾವಿತ್ರ್ಯವನ್ನು ಕೈಗೊಂಡವನು ಯಶಸ್ವಿಯಾಗಿ ಬಿಟ್ಟನು.	قَدْ أَفْلَحَ مَن تَزَكَّىٰ ﴿١٤﴾
15. ತನ್ನ ಪ್ರಭುವಿನ ನಾಮವನ್ನು ಸ್ಮರಿಸಿದವನು ಮತ್ತು ನಮಾಝ್ ಮಾಡಿದವನು.	وَذَكَرَ اسْمَ رَبِّهِ فَصَلَّىٰ ﴿١٥﴾
16. ಆದರೆ ನೀವು ಇಹಲೋಕ ಜೀವನಕ್ಕೆ ಆದ್ಯತೆ ಕೊಡುತ್ತೀರಿ.	بَلْ تُؤْثِرُونَ الْحَيَاةَ الدُّنْيَا ﴿١٦﴾
17. ವಸ್ತುತಃ ಪರಲೋಕವು ಹೆಚ್ಚು ಉತ್ತಮವೂ ಶಾಶ್ವತವೂ ಆಗಿದೆ.	وَالْآخِرَةُ خَيْرٌ وَأَبْقَىٰ ﴿١٧﴾
18. ಇದನ್ನೇ ಹಿಂದೆ ಬಂದಿದ್ದ ಗ್ರಂಥಗಳಲ್ಲಿ ಹೇಳಲಾಗಿತ್ತು-	إِنَّ هَٰذَا لَفِي الصُّحُفِ الْأُولَىٰ ﴿١٨﴾
19. ಇಬ್‌ರಾಹೀಮ್ ಮತ್ತು ಮೂಸಾರ ಗ್ರಂಥಗಳಲ್ಲಿ.	صُحُفِ إِبْرَاهِيمَ وَمُوسَىٰ ﴿١٩﴾

ಮೌನವಾಗಿ ಅದನ್ನು ಕೇಳುತ್ತೀರಿ. ನಾವು ನಿಮಗೆ ಓದಿಸಿ ಬಿಡುವೆವು ಆ ಬಳಿಕ ನೀವು ಮರೆಯಲಾರಿರಿ'.

5. ಅರ್ಥಾತ್- ಸಮಸ್ತ ಕುರ್‌ಆನಿನ ಒಂದು ಪದವೂ ಬಿಟ್ಟು ಹೋಗದಂತೆ ತಮ್ಮ ನೆನಪಿನಲ್ಲುಳಿಯುವುದು ತಮ್ಮ ಸಾಮರ್ಥ್ಯದಿಂದಾಗಿಯಲ್ಲ. ಬದಲಾಗಿ ಅದು ಅಲ್ಲಾಹನ ಅನುಗ್ರಹ ಮತ್ತು ಸೌಭಾಗ್ಯದ ಪರಿಣಾಮವಾಗಿದೆ. ಅನ್ಯಥಾ ಅಲ್ಲಾಹನು ಬಯಸಿದ್ದರೆ ಅದನ್ನು ಮರೆಸುತ್ತಿದ್ದನು.

6. ಅರ್ಥಾತ್- ಧರ್ಮಪ್ರಚಾರ ಕಾರ್ಯದ ಮೂಲಕ ನಾವು ನಿಮ್ಮನ್ನು ಯಾವುದೇ ರೀತಿಯ ಸಂಕಷ್ಟಕ್ಕೀಡು ಮಾಡ ಬಯಸುವುದಿಲ್ಲ. ಕಿವುಡರಿಗೆ ಕೇಳಿಸಲು ಅಥವಾ ಅಂಧರಿಗೆ ದಾರಿಗಾಣಿಸಲು ನಾವು ಹೇಳುವುದಿಲ್ಲ. ಲಭ್ಯವಿರುವ ಸರಳ ಮಾರ್ಗವೊಂದನ್ನು ನಾವು ನಿಮಗೆ ಗೊತ್ತು ಪಡಿಸುತ್ತೇವೆ. ಅದೇನೆಂದರೆ ಯಾರಾದರೂ ಉಪದೇಶದಿಂದ ಪ್ರಯೋಜನ ಪಡೆಯುತ್ತಾರೆಂದು ನಿಮಗೆ ಭಾಸವಾದರೆ ಉಪದೇಶಿಸಿರಿ. ಉಪದೇಶ ಸ್ವೀಕರಿಸಲು ಸಿದ್ಧರಿಲ್ಲವೆಂದು ಸ್ವಾನುಭವದಿಂದ ನಿಮಗೆ ತಿಳಿದು ಬಂದಿರುವಂತಹ ವ್ಯಕ್ತಿಗಳ ಹಿಂದೆ ಬೀಳುವ ಯಾವ ಅವಶ್ಯಕತೆಯೂ ನಿಮಗಿಲ್ಲ.